ಮುಂತಾದ ಆಕ್ಷೇಪಣೆಗಳು ಕೇಳಿಬಂದಿವೆ. ಈಗಾಗಲೇ ನಾನು ಪ್ರಸ್ತಾಪಿಸಿದ ಅನಂತಮೂರ್ತಿಯವರ ಲೇಖನವು ಈ ಪ್ರಶ್ನೆಗಳನ್ನು ತುಂಬಾ ಚೆನ್ನಾಗಿ ಚರ್ಚಿಸಿ ಸರಿಯಾದ ಉತ್ತರಗಳನ್ನು ಕೊಟ್ಟಿದೆ. ಚಿತ್ತಾಲರ ಕಾವ್ಯದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಸಸ್ಯಲೋಕ, ಪ್ರಾಣಿಲೋಕಗಳಿಂದ ಆಯ್ದು ತೆಗೆದ ಪ್ರತಿಮೆಗಳನ್ನು ಒಟ್ಟಾಗಿ ನೋಡಿದಾಗ, ಅವರ ಕಾವ್ಯದ ಭಿನ್ನವಾದ ಸಾಂಕೇತಿಕತೆ ಮನದಟ್ಟಾಗುತ್ತದೆ. ಮನುಷ್ಯನ ಜೀವಿತವೆಂಬ 'ಏಕಮುಖಿ' ಹೊಳೆಗೂ ಸಸ್ಯಲೋಕದ ವಿಧಿಯಾದ 'ಋತುಮಾನ'ದ ಮರುಜೀವಿತಕ್ಕೂ ಇಲ್ಲಿ ಮೂಡಿಬರುವ ಅಂತರವನ್ನು ಗಮನಿಸಬೇಕು. ಬೇಂದ್ರೆಯವರು 'ನಿದ್ದೆಗೊಮ್ಮೆ ನಿತ್ಯಮರಣ, ಎದ್ದ ಸಲ ನವೀನ ಜನನ ನಮಗೆ ಏಕೆ ಬಾರದೊ?' ಎಂದು ಹಂಬಲಿಸಿದ್ದು ಈ 'ಸಾಧ್ಯವಾಗದ' ಪುನರ್ನವತೆಯನ್ನೇ.

ಈ ಮಾತುಗಳನ್ನು ಬೆಳೆಸುವುದು ಅನಗತ್ಯ. ಚಿತ್ತಾಲರ ಕಾವ್ಯ ಮತ್ತು ಅದನ್ನು ಕುರಿತ ಘನವಾದ ವಿಮರ್ಶೆಯು ನಮ್ಮ ತಿಳಿವಳಿಕೆಯನ್ನು ಬೆಳೆಸುತ್ತದೆ. ಕವಿತೆಯೆಂಬ ಕಲೆಯ ಬಗ್ಗೆ ನಮಗಿರುವ ಪ್ರೀತಿ, ಗೌರವಗಳನ್ನು ಬೆಳೆಸುತ್ತವೆ. ಇಷ್ಟಕ್ಕೂ ವಿಮರ್ಶೆಯ ನೆರವಿಲ್ಲದೆಯೂ ನಮ್ಮ ಮನ ಮುಟ್ಟುವ ಕವಿಗಳಲ್ಲಿ ಗಂಗಾಧರ ಚಿತ್ತಾಲರೂ ಒಬ್ಬರು. ವ್ಯಾಧಿಯಿಂದ ಅಕಾಲಮೃತ್ಯುವಿಗೆ ತುತ್ತಾದ ಅವರ ಹುಟ್ಟಲಿದ್ದ ಕಾವ್ಯದಲ್ಲಿ ಮಾನುಷಿಕ ಮತ್ತು ಸಾಮಾಜಿಕಗಳ ಅರ್ಥಪೂರ್ಣ ಸಂಯೋಜನೆ ಆಗುತ್ತಿತ್ತೇನೋ ಎಂಬ ಊಹೆಯು, ಊಹೆಯಾಗಿಯೇ ಉಳಿಯುತ್ತದೆ. ಆದರೆ ಈ ಕವಿಯು ನಮಗೆ ಕೊಟ್ಟಿರುವುದು ಅನನ್ಯವಾಗಿದೆ, ಘನವಾಗಿದೆ.

●

## ಹಾಲು

ಆಕಾಶದಿಬ್ಬನಿಗೆ ನೆಲವ ನೆನೆಯಲು ಬಿಟ್ಟು
ಹಸರಾಣಿ ಬೀಜಗಳ ಹವೆಯಲ್ಲಿ ತೂರಿಟ್ಟು
ಹಸೀಹಸೀ ಹಸಿರಾಗಿ ಹುಲ್ಲುಗಾವಲ ಬೆಳಸು
ಗೋದಲೆಗಳಲ್ಲಿ ಸಾಲುಕಟ್ಟಿ ಹಸುಗಳ ಹಿಂಡು
ಕೊರಳಿಗೊಂದೊಂದು ಇನಿದನಿಯ ಗಂಟೆಯ
ಕೊಂಡು
ಹಗಲಿಡೀ ಹಸಿರಿನೆಳಗರಿಕೆ ಮೇಯಲು ಕಳಿಸು.
ಮಳೆ ಗಾಳಿ ಬಿಸಿಲ ಹಿತವಾದ ಆರೋಗಣೆಗೆ
ಮೈತುಂಬುವವು ಅವು
ಬೆದೆಯುವವು, ಈಯುವವು, ಕೆಚ್ಚಲು ಗುಮ್ಮೆ
ತೊರೆಯುವವು
ಬೆಂದೊಡಲ ತಣಿಸೆ ಧಾರೆಗರೆವ ಹಾಲೋಹಾಲು!
ಇದು ಕನಸೆ
ನೆಮ್ಮದಿಯ ಈ ಇಂಥ ಕ್ಷೀರಪಥವೂ ಕನಸೆ
ನಮ್ಮ ಈ ಹತವೀರ್ಯ ಶತಮಾನದಲ್ಲಿ?
ದಿನವೂ ನಡೆದಿದೆಯಲ್ಲ ಕೊಲ್ಲು ಕೊಲ್ಲು ಕೊಲ್ಲು
ಈ ನಿರಂತರ ಹತಿಗೆ ತಡೆಯೆಂತು, ಕೊನೆಯೆಲ್ಲಿ?
ನಿನ್ನೆ ಹೀರೋಶಿಮಾ ಕ್ಷಣಾರ್ಧದಲಿ ಹೋಮ
ಇಂದು ವಿಯತ್ನಾಮಿನಗ್ನಿಕುಂಡ
ನಾಳೆ ಮತ್ತೆಲ್ಲೋ ಭಗ್ಗನೆ ಹೊತ್ತಿಕೊಳ್ಳುವ ಹತ್ಯಾಕಾಂಡ
ಆಹುತಿಯನಿತ್ತಷ್ಟು ಹಸಿವ ಕೆಂಡ.
ಕಂಡಕಂಡಲ್ಲಿ ಇಬ್ಬಣದ ಉಬ್ಬರ ವೈರ
ಹಗೆಯ ಹೊಗೆಯಾಡಿಸುವ ಹೊಂಚುಗಣ್ಣು.
ಗುಡ್ಡದೊಲು ಬೆಳೆದ ಇಬ್ಬದಿಯ ಆಯುಧಭಾರ
ಕಿಡಿ ಹಾರೆ ಇಬ್ಬಣವು ಬೂದಿ ಮಣ್ಣು.

**-ಗಂಗಾಧರ ಚಿತ್ತಾಲ**